ಅದೇ ಗಳು ಅಥವಾ ಹಗ್ಗದಿಂದ ಕೆಳಗೆ ಇಳಿಸುವ ಕೆಲಸ ಎರಡೂ ಮಡಿಕೋಲಿನ ಪ್ರಮುಖವಾದ ವೃತ್ತಿ ಧರ್ಮಗಳು. ಈ ಮಡಿಕೋಲಿನಿಂದ, ನೆಲದಿಂದ ಹೆಚ್ಚು ಕಡಿಮೆ 15 ಅಡಿಗಳಷ್ಟಾದರೂ ಎತ್ತರದಲ್ಲಿ, ತೂಗಾಡುತ್ತಿರುವ, ಚಂಚಲವಾದ ಗಳು, ಕಂಬಿ, ಹಗ್ಗಗಳ ಮೇಲ ಆರು ಗಜದ ಸೀರೆ, ಪಂಚೆಗಳನ್ನು ಸುಕ್ಕಿಲ್ಲದಂತೆ ಹರವುವುದು ಸಾಮಾನ್ಯ ಕೌಶಲವಲ್ಲ. ಕೋಲಿನ ತುದಿಯ ಒಂದು ಬಿಂದುವಿನಲ್ಲಿ ಒದ್ದೆಬಟ್ಟೆಯ ಅಷ್ಟೂ ಭಾರವನ್ನು ಸಂಭಾಳಿಸುತ್ತಾ, ಮೇಲಕ್ಕೆ ತೆಗೆದುಕೊಂಡು ಹೋಗಿ, ಮಧ್ಯದಲ್ಲಿ ಮಡಿಬಟ್ಟೆಗಳು ಕೆಳಗೆ ಬಿದ್ದು ಹಳ್ಳ ಹಿಡಿಯದಂತೆ ಎಚ್ಚರವಹಿಸುತ್ತಾ ಒಣ ಹಾಕುವುದು ಸರ್ಕಸ್‌ಗಳಲ್ಲಿ ಟ್ರೇಪೀಸ್‌ನ ಕೌಶಲ ತೋರುವಷ್ಟು ಕೌಶಲ, ಕಷ್ಟ. ಈ ಮಡಿಕೋಲಿಗೆ ಕೆಲವೊಮ್ಮೆ ಅಡುಗೆಮನೆಯ ಗೂಟಕ್ಕೋ ಮೊಳೆಗೋ ನೇತು ಹಾಕಿದ್ದ ಬುಟ್ಟಿ ಗಿಟ್ಟಿ ಇಳಿಸಿಕೊಳ್ಳೋ ಕೆಲಸ ಇರುತ್ತಿತ್ತು. ಮನೆಯಲ್ಲೇ ಸಜ್ಜಿಗೆಯ ಕಲಸಿ ಸಣ್ಣ ಶ್ಯಾವಿಗೆ ಹೊಸೆಯುತ್ತಿದ್ದ ಕಾಲದಲ್ಲಿ ಎಳೆ ಎಳೆಯಾಗಿ ಹೊಸೆದ ಶ್ಯಾವಿಗೆಯನ್ನು ಒಣಗಿಸಲು ತಕ್ಷಣಕ್ಕೆ ಮಡಿಕೋಲೇ ಸಿಗ್ತಾ ಇದ್ದದ್ದು. ಎರಡು ಉದ್ದನೆಯ ಡಬ್ಬ, ಕೊಳದಪ್ಪಲೆಗಳನ್ನು ಇಟ್ಟು, ಅವೆರಡಕ್ಕೂ ಮಡಿಕೋಲಿನಿಂದ ಸೇತುವೆ ಕಟ್ಟಿ, ಆ ಬಿದುರ ಸೇತುವೆಯ ಮೇಲೆ ಶ್ಯಾವಿಗೆಯನ್ನು ತೂಗಿಬಿಟ್ಟು ಒಣಗಿಸುತ್ತಿದ್ದ ನಯನ ಮನೋಹರ ದೃಶ್ಯ, ಕೌಶಲ ಈಗ ಇಲ್ಲವೇ ಇಲ್ಲವೇನೋ.

ಇನ್ನು ಹಪ್ಪಳ, ಸಂಡಿಗೆ ಒಣಗಿಸಿಲು ಹಾಕಿದಾಗ ಕಾಗೆ, ನಾಯಿ ಓಡಿಸೋ ಕೆಲಸವನ್ನೂ ಮಡಿಕೋಲೇ ಮಾಡಬೇಕಾಗ್ತಿತ್ತು. ನಾಲ್ಕೈದು ಸಣ್ಣ ಮಕ್ಕಳು ಇರೋ ಮನೇಲಿ ಇದು ಕೆಲವೊಮ್ಮೆ ಆಟಿಕೆಯಾಗೂ ಒದಗೋದು. ಈ ನಾಲ್ಕೈದು ಅಡಿ ಉದ್ದದ ಕೋಲಿನ ಆ ಕಡೆ ಈ ಕಡೆ ಕಾಲು ಬಿಟ್ಟುಕೊಂಡು, ಒಬ್ಬರ ಹಿಂದೆ ಒಬ್ಬರು ನಿಂತು ಕೊಂಡು ಸೈಕಲ್‌ನಂತೆ ಓಡಿಸ್ತಾ ಆಟ ಆಡ್ತಾ ಇರೋವು. ಆಗೆಲ್ಲಾ ಆಟಿಕೆಗಳು ಎಂದರೆ ಇಂಥವೇ. ಇರೋದನ್ನೇ ಅವರವರ ಕಲ್ಪನಾವಿಲಾಸಕ್ಕೆ ಬಳಸಿಕೊಂಡು ಆನಂದ ಪಡೋದು. ರೆಡಿಮೇಡ್ ಅಂತಾ ಇರ್ತಾ ಇದ್ದಿದ್ದು ಕಡಿಮೆ. ಅಪರೂಪಕ್ಕೆ, ಕ್ಯಾತೆ ತೆಗೆಯೋ ಮನೆ ಹೈಕಳಿಗೆ ಬೆತ್ತದೇಟಿನಿಂದ ಬೆನ್ನುಕಾಯಿಸೋ ಶಿಕ್ಷೆ ಕೊಡಲು ಶಿಕ್ಷಾದಂಡವಾಗಿಯೂ ಕೆಲಸ ಮಾಡುತ್ತಿತ್ತು ಅದು.

ಹೀಗೆ ಮಡಿಕೋಲಿನ ದಯೆಯಿಂದ ಗಳುವನ್ನು ಬಿಟ್ಟು ಬಂದ ಮಡಿಬಟ್ಟೆಯುಟ್ಟು ಮನೆಕೆಲಸ ಬದುಕು ಮಾಡೋರನ್ನು – "ಅವರು ಮಡೀಲಿದಾರೆ, ಮಡಿಲಿರೋರು" ಅಂತೆಲ್ಲಾ ಪಾರಿಭಾಷಿಕ ಶಬ್ದಗಳಿಂದ ನಿರ್ದೇಶಿಸೋರು. ಹೀಗೆ ಹೇಳೋರ ಧ್ವನಿಯಲ್ಲಿ ಇಣುಕುತ್ತಿದ್ದ "ಕಾಕು"ವಿನಲ್ಲಿ ಎಲ್ಲೋ ಒಂದು ಕಡೆ ಭಯಭಕ್ತಿ ಬೆರೆತ "ಸ್ಪೆಷಾಲಿಟಿ"ಯೂ ಇಣುಕೋದು. ಅದೇನೋ ಆ ಮಡಿಲಿರೋರಿಗೆಲ್ಲಾ ತಾವು ಬೇರೆಯೋರಿಗಿಂತ ಶ್ರೇಷ್ಠ, ಸ್ವಲ್ಪ ಹೆಚ್ಚು ಅನ್ನೋ ಹೆಚ್ಚುಗಾರಿಕೆ ಇರ್ತಿತ್ತು ಅಂತಾ ನನಗೆ ಯಾವಾಗಲೂ ಅನ್ನಿಸೋದು. ಯಾಕೆ ಅಂದರೆ ಮಡಿಲಿರೋ ಅವರ್‍ಯಾರೂ ಮಡಿಯಲ್ಲದ ನೆಲ ಸಾರಿಸೋ ಬಟ್ಟೆ ಆಗಲೀ, ಕಸಪರಕೆಯಾಗಲಿ, ಬೇರೆಯೋರು ಕುಡಿದು ತಿಂದು ಮಾಡಿದ ಲೋಟ, ಎಲೆಗಳನ್ನಾಗಲಿ ಮುಟ್ತಾ ಇರಲಿಲ್ಲ. ಮನೇಲಿ ಓಡಾಡಿಕೊಂಡಿರೋ ನಮ್ಮಂತಹ ಚಿಳ್ಳೆ ಪಿಳ್ಳೆ ಅಮ್ಮಡಿಗಳ ಮೇಲೆ, "ಅದು ತೆಗಿ, ನೋಡು ಆ ಬಾಗಿಲ ಮುಂದಿರೋ ಕಾಲೊರೆಸಿಕೊಳ್ಳೋ ಗೋಣಿಚೀಲದಲ್ಲಿ ನೂಲು ಕಾಣ್ತಾ ಇದೆ, ಅದನ್ನು ತೆಗಿ, ಮೈಲಿಗೆ ಆಗತ್ತೆ, ಆ ಬಟ್ಟೆ ಆ ಕಡೆ ಇಡು, ದೂರ ಹೋಗು ತಗಲಿಸಿಕೊಳ್ಳಬೇಡ" – ಅಂತೆಲ್ಲಾ ಹುಕುಂ ಚಲಾಯ್ಸತಾ ಇರೋರು ನೋಡಿ, ಅದನ್ನ ನೋಡಿದಾಗ ನಾವೂ ಯಾವಾಗ ದೊಡ್ಡೋರಾಗಿ ಮಡಿ ಉಟ್ಟುಕೊಂಡು ಹೀಗೆ ಹುಕುಂ ಚಲಾಯಿಸೋ ಅಧಿಕಾರ ಬರತ್ತೋ ಅನಿಸುತ್ತಿತ್ತು.

ಈ ಮಡಿಬಟ್ಟೆ ಉಟ್ಟವರನ್ನು ಸಣ್ಣ ಪುಟ್ಟ ಹುಡುಗ್ರು ಮಕ್ಕಳು, ಸ್ನಾನ ಆಗದೆ ಇರೋರು ಮುಟ್ಟೋ ಹಾಗೇ ಇರಲಿಲ್ಲ. ಕೋವಿಡ್ ಇಲ್ಲದಿದ್ದರೂ ಕೊನೆಪಕ್ಷ ಎರಡಡಿ ಅಂತರ ಕಾಯ್ದುಕೊಳ್ಳ